ಓ. ಎಸ್. ನಂ. 82-2014

ದಿನಾಂಕಃ 06-10-2023 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಪಾಟೀ ಸವಾಲು ಃ ವಾದಿ ಪರವಾಗಿ ಶ್ರೀ. ಎಚ್.ಎಸ್. ಕೆ . ವಕೀಲರಿಂದಃ**

1. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ವಕೀಲರು ತಿಳಿಸಿರುತ್ತಾರೆ. ಅದರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ವಕೀಲರು ಹೇಳಿದ ಮೇರೆಗೆ ಪ್ರಮಾಣ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ದಾವೆಗೆ ಯಾವುದೇ ತಕರಾರನ್ನು ಸಲ್ಲಿಸಿಲ್ಲ. ಯಾರು ತಕರಾರನ್ನು ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ದಾವಾಸ್ತಿಯು ಕೈಲವಾಡ ಗ್ರಾಮದ ಸರ್ವೆ ಸಂಖ್ಯೆ 81 ಹಾಗೂ 5 ಎಕರೆ 15 ಗುಂಟೆ ವಿಸ್ತೀರ್ಣ ಹೊಂದಿರುತ್ತದೆ. ಸದ್ರಿ ಜಮೀನು ನನ್ನ ಹೆಸರಿಗೆ ಮಂಜೂರಾಗಿರುತ್ತದೆ. ಯಾವ ದಿನಾಂಕದಂದು ಮಂಜೂರಾಗಿರುತ್ತದೆ ಎಂದು ನನಗೆ ನೆನಪಿಲ್ಲಾ. ಎಷ್ಟು ವರ್ಷಗಳ ಹಿಂದೆ ಮಂಜುಾರಾಗಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ಯಾವ ಷರತ್ತುಗಳ ಮೇಲೆ ಮಂಜೂರಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದ್ರಿ ಜಮೀನನಲ್ಲಿ ಸುಮಾರು 200 ಮರಗಳು ಇವೆ. ಸದ್ರಿ ಮರಗಳನ್ನು ಕಡಿಯಲು ಅರ್ಜಿಯನ್ನು ಸಲ್ಲಿಸಿಲ್ಲ. ನನ್ನ ಪರವಾಗಿ ಬೇರೆಯವರಿಗೆ ಮರಗಳನ್ನು ಕಡಿಯಲು ಪರವಾನಿಗೆಯನ್ನು ಸಹ ನೀಡಿಲ್ಲ. ಸದ್ರಿ ಜಮೀನಿನನ್ನು 15 ವರ್ಷಗಳ ಕಾಲ ಪರಭಾರ ಮಾಡಬಾರದು ಎಂಬ ಷರತ್ತಿನ ಬಗ್ಗೆ ನನಗೆ ಗೊತ್ತಿಲ್ಲ. ಸದ್ರಿ ಷರತ್ತಿನ ಅವಧಿಯನ್ನು ಕಡಿಮೆ ಮಾಡುವಂತೆ ಯಾರಿಗೂ ಅರ್ಜಿಯನ್ನು ಸಲ್ಲಿಸಿಲ್ಲ.

2. ವಲಯ ಅರಣ್ಯಾಧಿಕಾರಿಗಳು, ಅಣಶಿಯವರು ಸನ್ 1997 ರಲ್ಲಿ ಸರ್ವೆ ಸಂಖ್ಯೆ 81 ಇದ್ದ ಮರಗಳನ್ನು ಕಡಿಯುವುದಕ್ಕಾಗಿ ನಾನು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ನಾನು ಸಹಿ ಮಾಡಿಲ್ಲ. ಅದೇ ರೀತಿ ದಿಃ 28-01-1998 ರಂದು 15 ವರ್ಷದ ಪರಾಧೀನ ಮಾಡಬಾರದೆಂಬ

ಷರತ್ತು ಕಡಿಮೆಗೊಳಿಸಲು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಯಾವ ಅರ್ಜಿಯ ಆಧಾರದ ಮೇಲೆ ಷರತ್ತು ಕಡಿಮೆಗೊಂಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ, ಕಾರವಾರರವರು ದಿನಾಂಕಃ 20-11-1998 ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕಾರವಾರ ಇವರಿಗೆ ಪತ್ರವನ್ನು ಬರೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ತದನಂತರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕಾರವಾರರವರು ದಿನಾಂಕಃ 22-10-2003 ರಲ್ಲಿ ಜಿಲ್ಲಾಧಿಕಾರಿ, ಕಾರವಾರರವರು ಇವರಿಗೆ ಪತ್ರವನ್ನು ಬರೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಎರಡೂ ಪತ್ರಗಳು ಸರ್ವೆ ಸಂಖ್ಯೆ 81 ರಲ್ಲಿ ಇದ್ದ ಮರಗಳನ್ನು ಕಡಿಯಲು ಆದಂತಹ ಪತ್ರಗಳು ಎಂದರೆ ಸರಿಯಲ್ಲ. ತಹಶೀಲ್ದಾರ, ಜೋಯಿಡಾದವರು ದಿನಾಂಕಃ 16-12-2003 ರಂದು ಸರ್ವೆ ಸಂಖ್ಯೆ 81 ರಲ್ಲಿ ಇದ್ದ ಮರಗಳನ್ನು ಕಡಿಯುವ ವಿಷಯಕ್ಕೆ ಸಂಬಂಧಿಸಿದಂತೆ ಪತ್ರವನ್ನು ಬರೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ಮುಂದುವರೆ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ., ದಾಂಡೇಲಿ